ರಾಜೀವ್‌ಗಾಂಧಿ ನೀರಿನ ಯೋಜನೆಯಡಿಯಲ್ಲಿ ಕುಡಿಯುವ ನೀರಿನ ಸೌಲಭ್ಯ ಒದಗಿಸುವುದು.

87(174)

ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ(ಬೈಲಹೊಂಗಲ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಕೇಂದ್ರ ಸರ್ಕಾರದ ರಾಜೀವ್‌ಗಾಂಧಿ ಕುಡಿಯುವ ನೀರಿನ ಯೋಜನೆಯಡಿಯಲ್ಲಿ ಬೆಳಗಾಂವ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ 19 ಹಳ್ಳಿಗಳಿಗೆ ಕುಡಿಯು ನೀರಿನ ಯೋಜನೆಗೆ ಮಂಜೂರಾತಿಯನ್ನು ಎಂದು ನೀಡಲಾಯಿತು ಹಾಗೂ ಎಷ್ಟು ಮೊತ್ತಕ್ಕೆ ನೀಡಲಾಯಿತು ಹಾಗೂ ಕೇಂದ್ರ ಸರ್ಕಾರದವರು ಈಗಾಗಲೇ ಈ ಕೆಲಸಕ್ಕೆ ಎಷ್ಟು ಹಣವನ್ನು ಬಿಡುಗಡೆ ಮಾಡಿರುತ್ತದೆ.

ಆ. ಈ ಯೋಜನೆಯಡಿಯಲ್ಲಿ ಬೈಲಹೊಂಗಲ ತಾಲ್ಲೂಕಿನ ಯಾವ ಯಾವ ಹಳ್ಳಿಗಳು ನೀರಿನ ಸೌಲಭ್ಯವನ್ನು ಪಡೆದುಕೊಳ್ಳುವುವು? (ಪೂರ್ಣವಾದ ವಿವರ ನೀಡುವುದು);

ಇ. ಕೇಂದ್ರ ಸರ್ಕಾರದವರು ಹಣ ನೀಡಿದ್ದರೂ ಸಹ ರಾಜ್ಯ ಸರ್ಕಾರದವರು ಗುತ್ತಿಗೆದಾರರನ್ನೂ ಇನ್ನೂ ನೇಮಿಸದೇ ಇರುವುದರಿಂದ ಕೆಲಸ ವಿಳಂಬವಾಗುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ. ಭೂ ಸೇನಾ ನಿಗಮದವರ ಕಡೆಗೆ ಯಾವುದೇ ಮೂಲಭೂತ ಸೌಕರ್ಯಗಳಿಲ್ಲದಿದ್ದರೂ ಸಹ ಅವರಿಗೆ ಈ ಕೆಲಸವನ್ನು ಒದಗಿಸಲು ಸರ್ಕಾರ ನಿರ್ಧರಿಸುತ್ತಿರುವ ಸಂಗತಿ ನಿಜವಲ್ಲವೇ? ಹಾಗಿದ್ದಲ್ಲಿ ಯೋಗ್ಯ ಏಜನ್ಸಿಗೆ ಒದಗಿಸಿ ಕೆಲಸ ಮಾಡಲು ಕ್ರಮ ಕೈಗೊಳ್ಳಲಾಗುವುದೇ?

ಉ. ಕೇಂದ್ರ ಸರ್ಕಾರದ ಹಣದಿಂದ ನಿಯಮಿತ ವೇಳೆಯಲ್ಲಿ ಕೆಲಸ ಮಾಡಿ ಮುಗಿಸಲು ಯಾವ ಯಾವ ಕ್ರಮ ಕೈಗೊಳ್ಳಲಾಗುವುದು?

ಊ. ಈ ಕೆಲಸವನ್ನು ಸಾಕಷ್ಟು ವಿಳಂಬ ಮಾಡುತ್ತಿರುವ ಅಧಿಕಾರಿಗಳ ಮೇಲೆ ಕ್ರಮ ಜರುಗಿಸಲಾಗುವುದೇ?

ಶ್ರೀ ಎಂ.ವೈ.ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು):

ಅ. ಬೆಳಗಾವಿ ಜಿಲ್ಲೆ, ಬೈಲಹೊಂಗಲ ತಾಲ್ಲೂಕಿನ ಅಮಟೂರು ಮತ್ತು ಇತರ 19 ಗ್ರಾಮಗಳಿಗೆ ನೀರು ಸರಬರಾಜು ಯೋಜನೆಯನ್ನು ಕೇಂದ್ರ ಸರ್ಕಾರವು ದಿನಾಂಕ: 1-8-1997ರಂದು ಅನುಮೋದಿಸಿದ್ದು, ಈ ಯೋಜನೆಯ ರೂ.920.51 ಲಕ್ಷ ಮೊತ್ತದ ಅಂದಾಜುಪಟ್ಟಿ ರಾಜ್ಯ ಸರ್ಕಾರದಿಂದ ಆಡಳಿತಾತ್ಮಕ ಮಂಜೂರಾತಿಯನ್ನು ದಿನಾಂಕ:5-8-1998ರಂದು ನೀಡಲಾಗಿದೆ. ಕೇಂದ್ರ ಸರ್ಕಾರವು ಈ ಯೋಜನೆಯ ಅನುಷ್ಠಾನಕ್ಕಾಗಿ ರೂ. 345. 19 ಲಕ್ಷಗಳನ್ನು ಬಿಡುಗಡೆ ಮಾಡಿರುತ್ತದೆ.

ಆ. ಈ ಯೋಜನೆಯಡಿ ಕೆಳಕಂಡ 21 ಗ್ರಾಮಗಳು ಕುಡಿಯುವ ನೀರಿನ ಸೌಲಭ್ಯ ಪಡೆಯುವವು; ಅಮಟೂರು, ನಯಾನಗರ, ಬೈಲವಾಡ, ಚಿವಟಗುಂಡಿ, ದೇವಲಾಪುರ, ಲಕ್ಕುಂಡಿ, ಮ್ಯಾಕಲಮರಡಿ, ಮಲ್ಲಾಪುರ ಕೆ.ಎನ್., ಮತ್ತಿಕೊಪ್ಪ ಮುರ್ಕಿಬಾವಿ, ಮದನಬಾವಿ, ನೇಸರಗಿ, ನಾಗನೂರ, ಸೋಮನಟ್ಟಿ, ವಣ್ಣೂರ, ಯರಗುದ್ದಿ ಆನಿಗೋಳ ವಕ್ಕುಂದ, ಕೊರವಿನಕೊಪ್ಪ ಮತ್ತು ಬೇವಿನಕೊಪ್ಪ.

ಇ. ಈ ಯೋಜನೆಗೆ ಟೆಂಡರ್ ಕರೆಯಲಾಗಿದ್ದು, ಸ್ವೀಕೃತವಾಗಿರುವ ಟೆಂಡರ್‌ಗಳ ಪೈಕಿ ಟೆಂಡರ್ ಷರತ್ತುಗಳ: ಇಲಾಖಾ ನಿಯಮಗಳ ಪ್ರಕಾರ : ಅರ್ಹತೆ ಹೊಂದಿದ : ಸೂಕ್ತ ದರ ನೀಡಿದ ಟೆಂಡರುದಾರರು ದೊರೆಯದಿದ್ದರಿಂದ ಟೆಂಡರ್‌ಗಳನ್ನು ನಿರಾಕರಿಸಲಾಗಿದೆ.

ಈ. ಕರ್ನಾಟಕ ಭೂ ಸೇನಾ ನಿಗಮವು ಈ ಯೋಜನೆಯ ಕಾಮಗಾರಿಗಳ ನಿರ್ಮಾಣಕ್ಕಾಗಿ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಹೊಂದಿದ್ದು, ಯೋಜನೆಯನ್ನು ಕಾರ್ಯಗತಗೊಳಿಸಲು ಸಮರ್ಥವಿರುವುದರಿಂದ ಈ ಯೋಜನೆಯ ಕಾಮಗಾರಿಗಳ ನಿರ್ಮಾಣ ಕೆಲಸವನ್ನು ನಿಗಮಕ್ಕೆ ವಹಿಸುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಉ. ಈ ಯೋಜನೆಗಳನ್ನು ಆದಷ್ಟು ಶೀಘ್ರವಾಗಿ ಕೈಗೆತ್ತಿಕೊಂಡು ಆದ್ಯತೆ ಮೇಲೆ ಪೂರ್ಣಗೊಳಿಸಲು ಉದ್ದೇಶಿಸಿದೆ. ಈ ಯೋಜನೆಯನ್ನು ಸಬ್‌ಮಿಷನ್ ಕಾರ್ಯಕ್ರಮದಡಿ ಅನುಷ್ಠಾನಗೊಳಿಸಬೇಕಾಗಿದ್ದು, ವೆಚ್ಚವನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ 75 : 25 ಪ್ರಮಾಣದಲ್ಲಿ ಭರಿಸಬೇಕಾಗುತ್ತದೆ.

ಊ. ಉದ್ಭವಿಸುವುದಿಲ್ಲ.

ಉದ್ಯೋಗ ಭರವಸೆ ಯೋಜನೆಯಡಿಯಲ್ಲಿ ತೆಗೆದುಕೊಂಡ ಕಾರ್ಯಗಳು.